# ‘ಆಕಾಶವಾಣಿ ಮತ್ತು ಜಾನಪದ’
# ಉಪನ್ಯಾಸ ಕಾರ್ಯಕ್ರಮ




ಧಾರವಾಡ : ಹೊಸ ಪೀಳಿಗೆ ಮೂಲ ಜಾನಪದ ಕಲಾಪ್ರಕಾರಗಳನ್ನು ಮರೆತು, ತಿರುಚಿ ತಾವು ಮಾಡಿದ್ದೇ ಜಾನಪದ ಕಲಾಪ್ರಕಾರ ಎಂದು ಬಿಂಬಿಸುತ್ತಿರುವುದು, ಮೂಲ ಜಾನಪದಕ್ಕೆ ಅಪಾಯ ತಂದಿಡುವಂಥ ಸಂಗತಿಯಾಗಿದೆ, ಮೂಲ ಜಾನಪದ ಯಾವುದೇ ಕಲಾಪ್ರಕಾರದಲ್ಲಿ ಹಾಡುಗಳನ್ನು ಹಾಡದೇ, ತಾವೇ ಸೃಷ್ಟಿಸಿದ ವಿಚಿತ್ರ ಬಗೆಯ ಹಾಡುಗಳನ್ನು ಹಾಡಿ ತಾವೇ ಜಾನಪದ ವಿದ್ವಾಂಸರು ಎಂದು ಕೆಲವರು ಪ್ರಚಾರ ಪಡಿಯುತ್ತಿರುವುದು ದುರದೃಷ್ಟಕರ ಎಂದು ಆಕಾಶವಾಣಿ ಧಾರವಾಡ ಕೇಂದ್ರದ ನಿವೃತ್ತ ನಿಲಯ ನಿರ್ದೇಶಕರಾದ ಶ್ರೀ ಸಿ.ಯು. ಬೆಳ್ಳಕ್ಕಿ ಹೇಳಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ಡಾ. ದೇವೇಂದ್ರಕುಮಾರ ಹಕಾರಿ ದತ್ತಿ ಅಂಗವಾಗಿ ದಿನಾಂಕ ೭–೪–೨೦೧೯ ರಂದು ಆಯೋಜಿಸಿದ್ದ ‘ಆಕಾಶವಾಣಿ ಮತ್ತು ಜಾನಪದ’ ವಿಷಯ ಮೇಲೆ ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಉತ್ತರ ಕರ್ನಾಟಕ ಜಾನಪದ ಕಲೆಗಳ ತವರೂರಾಗಿದ್ದು, ಎಲ್ಲಪ್ರಕಾರಗಳ ಜಾನಪದ ಕಲಾವಿದರು ಇಲ್ಲಿ ಆಗಿ ಹೋಗಿದ್ದಾರೆ ಎಂಬುದು ಹೆಮ್ಮೆಯ ಸಂಗತಿ, ವಿನಾಶದ ಅಂಚಿನಲ್ಲಿರುವ ಮೂಲ ಜಾನಪದ ಕಲೆಗಳ ಸಂರಕ್ಷಣೆಗಾಗಿ ಆಕಾಶವಾಣಿ ಧಾರವಾಡ ಕೇಂದ್ರವು ಹಗಲಿರುಳು ಶ್ರಮಿಸಿ, ಸಾಧ್ಯವಿದ್ದಷ್ಟು ಕಲಾ ಪ್ರಕಾರಗಳನ್ನು ಸಂರಕ್ಷಿಸಿದೆ, ಈ ಬಗ್ಗೆ ಧಾರವಾಡ ಆಕಾಶವಾಣಿ ಕೇಂದ್ರದ ದಾಸ್ತಾನಿನಲ್ಲಿ ಈಗಲೂ ದಾಖಲೆಗಳು ಲಭ್ಯ ಇರುತ್ತವೆ, ಆಕಾಶವಾಣಿ ಕೇಂದ್ರಗಳಲ್ಲಿ ಜಾನಪದ ವಿಭಾಗ ಇರುವುದು ಕೇವಲ ಕೈಬೆರಳಣಿಕೆಯಷ್ಟು ಕೇಂದ್ರಗಳಲ್ಲಿ ಮಾತ್ರ, ಉತ್ತರ ಕರ್ನಾಟಕದಲ್ಲಿ ಜಾನಪದದ ಗಟ್ಟಿ ಬೇರುಗಳು ಮತ್ತು ಪ್ರಸಿದ್ಧ ಕಲಾವಿದರು ಇದ್ದುದರಿಂದ, ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಜಾನಪದ ವಿಭಾಗ ಕಾರ್ಯ ಮಾಡುತ್ತಿದೆ, ಆ ಮೂಲಕ ಆಕಾಶವಾಣಿ ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವಲ್ಲಿ ಮಹತ್ವದ ಕಾರ್ಯನಿರ್ವಹಿಸಿದೆ ಎಂದು ಹೇಳಬಹುದಾಗಿದೆ, ಡಾ.ದೇವೇಂದ್ರಕುಮಾರ ಹಕಾರಿಯವರು ಜಾನಪದ ವಿದ್ವಾಂಸರಾಗಿ ಸಾಕಷ್ಟು ಜಾನಪದ ಕಲಾವಿದರನ್ನು ಕರೆತಂದು ಆಕಾಶವಾಣಿಗೆ ಪರಿಚಯಿಸಿ, ಅವರ ಪ್ರತಿಭೆಗಳಿಗೆ ಪ್ರೋತ್ಸಾಹ ನೀಡಿದ ಮಹಾಚೇತನ ಎಂದು ಹೇಳಿದರು.

ಡಾ. ದೇವೇಂದ್ರಕುಮಾರ ಹಕಾರಿಯವರು ಒಬ್ಬ ಉತ್ತಮ ಪ್ರಸಾರಕ. ಅಂದರೆ ಎಲ್ಲಾ ಕ್ಷೇತ್ರದಲ್ಲಿ ಪ್ರಸಾರಿಕರಾಗುವುದು ಕಷ್ಟ. ಏಕೆಂದರೆ ಅದರಲ್ಲಿ ಉತ್ತಮ ಭಾಷಣಕಾರ, ಅಭಿನಯಗಾರ, ಧ್ವನಿಗಳ ಏರಿಳಿತ, ಬದುಕಿನ ಏಳುಬೀಳುಗಳನ್ನು ಒಟ್ಟಿಗೆ ಸಾರುವವ ಪ್ರಸಾರಕನಾಗಲು ಸಾಧ್ಯ. ಈ ಎಲ್ಲವನ್ನೂ ಮೈಗೂಡಿಸಿಕೊಂಡವರು ಡಾ. ಹಕಾರಿಯವರು. ಹಾಗಾಗಿ ಇವರು ಒಬ್ಬ ಉತ್ತಮ ಪ್ರಸಾರಕ, ಅಲ್ಲದೇ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೈಯಾಡಿಸಿದವರು, ಅದರಲ್ಲಿ ಸಮಾಜಮುಖಿಯಾಗಿ ಬರಹಗಳ ಮೂಲಕ ಸಮಾಜವನ್ನು ಸುಧಾರಿಸಿದ ವ್ಯಕ್ತಿ ಎಂದು ಧಾರವಾಡ ಆಕಾಶವಾಣಿ ಕೇಂದ್ರದ ನಿವೃತ್ತ ನಿಲಯ ನಿರ್ದೇಶಕರಾದ ಸಿ. ಯು. ಬೆಳ್ಳಕ್ಕಿ ಹೇಳಿದರು.

‘ಆಕಾಶವಾಣಿ ಮತ್ತು ಜಾನಪದ’ ವಿಷಯಕ್ಕೆ ದೇವೇಂದ್ರಕುಮಾರ ಹಕಾರಿ ಸಾಕಷ್ಟು ದುಡಿದವರು. ಮೂಲಬೇರಾದ ಜಾನಪದವನ್ನು ಆಧಾರವಾಗಿಟ್ಟುಕೊಂಡು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಬಳಸಿರುವುದು ಹೆಮ್ಮೆ. ಆದರೆ ಅದಕ್ಕೆ ವೇದಿಕೆ ಕೊಟ್ಟಿರುವುದು ಆಕಾಶವಾಣಿ. ಧಾರವಾಡಕ್ಕೆ ಆಕಾಶವಾಣಿ ಬರಲು ಮುಖ್ಯ ಕಾರಣ ಧಾರವಾಡದಲ್ಲಿ ಸಾಹಿತ್ಯ ಮತ್ತು ಜನಪದ ಕಲೆಗಳ ಸಂಗ್ರಹ ಮತ್ತು ಜನಪದ ಕಲಾವಿದರು ಕಾರಣರಾಗಿದ್ದಾರೆ ಎಂದರು.

ಧಾರವಾಡ ಆಕಾಶವಾಣಿಯಲ್ಲಿ ಸುಮಾರು ೫೦೦ ಕ್ಕೂ ಹೆಚ್ಚು ಕಲಾತಂಡಗಳಿವೆ, ೩೫೦೦ ಕ್ಕೂ ಹೆಚ್ಚು ಕಲಾವಿದರಿದ್ದಾರೆ. ೫೮ ಹೆಚ್ಚು ಜನಪದ ಕಲಾಪ್ರಕಾರಗಳಿವೆ. ಇವರನ್ನು ನಾವು ಏಕೆ ಗುರುತಿಸುತ್ತಿಲ್ಲ, ಆದರೆ ಯಾವುದೇ ಒಂದು ಚಿತ್ರದಲ್ಲಿ ಅರ್ಧಮರ್ಧ ಹಾಡಿದ ಕಲಾವಿದರನ್ನು (ಮಾಯದಂಥ ಮಳೆ ಹಾಗೂ ಎಲ್ಲಾ ಮಾಯ) ಜಾನಪದ ಕಲಾವಿದರೆಂದು ಹೊಗಳುತ್ತಿರುವುದು ಬೇಸರದ ಸಂಗತಿ ಎಂದು ಹೇಳಿದರು.

ನಶಿಸಿ ಹೋಗುತ್ತಿರುವ ‘ಬಸವಂತ, ಬಲವಂತ’ ಗೀಗೀ, ಚೌಡಕಿ ಪದ ಹೀಗೆ ಮುಂತಾದ ಪ್ರಕಾರಗಳನ್ನು ಉಳಿಸುವ ಕೆಲಸವನ್ನು ಆಕಾಶವಾಣಿ ಮಾಡಿದೆ, ಈಗಲೂ ಸಹ ಮಾಡುತ್ತಿದೆ. ಆದರೆ ಕೆಲ ಜನಪದ ಪ್ರಕಾರದ ಕಲಾವಿದರು ಈಗ ಇಲ್ಲದಿರುವುದು ಬೇಸರ ಮತ್ತು ಅದು ಮರೆಯಾಗುತ್ತಿದೆ. ಆದರೆ ಹಾಡುಗಳ ಧ್ವನಿಯಿಂದ ಇಂಥ ಪ್ರಕಾರ ಇತ್ತು ಎಂದು ಹೇಳುವ ಪರಿಸ್ಥಿತಿ ಬಂದಿದೆ.

ನಮ್ಮ ಉತ್ತರ ಕರ್ನಾಟಕ ಜಾನಪದವು ತಾಳಬದ್ಧವಾಗಿದೆ, ಅದನ್ನು ಉಳಿಸಲು ಯಾರೂ ಮುಂದೆ ಬರುತ್ತಿಲ್ಲ. ವಿಶ್ವವಿದ್ಯಾಲಯ ಮತ್ತು ಅಕಾಡೆಮಿಗಳೂ ಸಹ ಮುಂದೆ ಬರದಿರುವುದು ಬೇಸರ ತಂದಿದೆ ಎಂದು ಅವರು ಹೇಳಿದರು.

ದತ್ತಿದಾನಿಗಳಾದವರು ಆಕಾಶವಾಣಿ ಮತ್ತು ಜನಪದ ಸಂಗೀತವನ್ನು ಉಳಿಸಿ ಬೆಳೆಸಲು ಸಹಕಾರಿಯಾಗುವುದರ ಜೊತೆಗೆ ಕಲಾವಿದರನ್ನು ಉಳಿಸುವ ಕೆಲಸ ಮಾಡುತ್ತಿರುವುದೇ ಹೆಮ್ಮೆಯ ಸಂಗತಿ. ಮಾಧ್ಯಮಗಳಿಂದ ಹಿಡಿದು ಪ್ರತಿಯೊಬ್ಬರೂ ಸಹ ಮೂಲ ಜಾನಪದವನ್ನು ಉಳಿಸುವ ಕೆಲಸ ಮಾಡಿದರೆ, ತಾನೇ ಕನ್ನಡ ಸಾಹಿತ್ಯ ಶ್ರೀಮಂತವಾಗಲು ಸಾಧ್ಯ ಎಂದು ಹೇಳಿದರು.

ಸಂಘದ ಉಪಾಧ್ಯಕ್ಷರಾದ ಮಕ್ಕಳ ಸಾಹಿತಿ ನಿಂಗಣ್ಣ ಕುಂಟಿ (ಇಟಗಿ) ಅಧ್ಯಕ್ಷತೆ ವಹಿಸಿ ಮಾತನಾಡಿ, ಆಕಾಶವಾಣಿಯಿಂದ ಬರುವ ಕಾರ್ಯಕ್ರಮಗಳಿಂದ ಮಾಹಿತಿ ಸಿಗುವ ಜೊತೆಗೆ ಶಿಕ್ಷಣ ನೀಡುವ ಕೆಲಸ ಮಾಡುತ್ತಿತ್ತು. ಅದರಲ್ಲೂ ಜಾನಪದ ಪ್ರಕಾರಗಳನ್ನು ಉಳಿಸಲು ಹಲವಾರು ಯೋಜನೆಗಳನ್ನು ಹಾಕಿಕೊಂಡು ಕಲಾವಿದರನ್ನು ಪ್ರೋತ್ಸಾಹಿಸುವ ಕೆಲಸ ಮಾಡಿದೆ ಎಂದು ಹೇಳಿದರು.

ದತ್ತಿ ದಾನಿಗಳಾದ ರವಿಶಂಕರ ಡಿ. ಹಕಾರಿ ಮಾತನಾಡಿ, ತಮ್ಮ ತಂದೆಯವರ ಸಾಹಿತ್ಯದ ಪ್ರಕಾರಗಳನ್ನು ಉಳಿಸಿ, ಬೆಳೆಸಿಕೊಂಡು ಹೋಗುವ ನಿಟ್ಟಿನಲ್ಲಿ ಸಮಾಜಮುಖಿಯಾಗಿರಲು ಈ ದತ್ತಿ ಇಡಲಾಗಿದೆ. ಅದನ್ನು ಕರ್ನಾಟಕ ವಿದ್ಯಾವರ್ಧಕ ಸಂಘವು ಉತ್ತಮವಾಗಿ ನಿರ್ವಹಿಸಿಕೊಂಡು ಹೋಗುತ್ತಿದೆ ಎಂದು ಹೇಳಿದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಸತೀಶ ತುರಮರಿ ಸ್ವಾಗತಿಸಿದರು. ಕಾರ್ಯಕ್ರಮದ ಸಂಯೋಜಕರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಚೈತ್ರಾ ಮೋಹನ ನಾಗಮ್ಮನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ವಂದಿಸಿದರು. ಮಾರ್ತಾಂಡಪ್ಪ ಕತ್ತಿ ನಿರೂಪಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳಾದ ಶಿವಪುತ್ರ ಬೆಲ್ಲದ, ಕೃಷ್ಣ ಜೋಶಿ ಹಾಗೂ ಡಾ. ಆನಂದ ಪಾಟೀಲ, ಶ್ರೀಮತಿ ಕಸ್ತೂರಿದೇವಿ ಡಿ. ಹಕಾರಿ, ಚಂದ್ರಿಕಾ ನಾಗಮ್ಮನವರ, ಮಧುಮತಿ ಸಣಕಲ್ಲ, ಪ್ರಭು ಹಂಚಿನಾಳ, ಮಾರ್ಕಂಡೇಯ ದೊಡಮನಿ, ಬಿ. ಕೆ. ಹೊಂಗಲ, ಬಿ. ಎಸ್. ಶಿರೋಳ, ಪ್ರೇಮಾನಂದ ಶಿಂಧೆ, ಚನಬಸಪ್ಪ ಅವರಾದಿ ಮತ್ತು ಹಕಾರಿ ಪರಿವಾರದ ಸದಸ್ಯರು, ಮತ್ತಿತರರು ಭಾಗವಹಿಸಿದ್ದರು.

**ಚೈತ್ರಾ ಮೋಹನ ನಾಗಮ್ಮನವ**
ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ
ಏಪ್ರಿಲ್ ತಿಂಗಳ ದತ್ತಿ ಕಾರ್ಯಕ್ರಮ ಸಂಯೋಜಕರು
ಮೊ : ೯೭೩೯೫–೯೧೧೩೭